ಬ್ಲೂವೇಲ್ ನಿಷೇಧ ಸುಪ್ರೀಂ ನೋಟಿಸ್

ನವದೆಹಲಿ: ಪ್ರಾಣಾಂತಿಕ ಎನಿಸಿರುವ ಬ್ಲೂವೇಲ್ ಚಾಲೆಂಜ್ ಗೇಮ್‌ಅನ್ನು ಸಂಪೂರ್ಣ ನಿಷೇಧಿಸಲು ಕೋರಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ನೋಟೀಸ್ ಜಾರಿ ಮಾಡಿದ್ದು ಮೂರು ವಾರಗಳಲ್ಲಿ ಉತ್ತರಿಸುವಂತೆ ಕೇಂದ್ರಕ್ಕೆ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ, ನ್ಯಾ ಎ.ಎಂ. ಖಾನ್ವಿಲ್ಕರ್ ಮತ್ತು ನ್ಯಾ ಡಿ.ವೈ. ಚಂದ್ರಚೂಡ್ ಅವರನ್ನೊಳಗೊಂಡ ಪೀಠ ಬ್ಲೂವೇಲ್ ಚಾಲೆಂಜ್ ಕುರಿತ ಮನವಿಯನ್ನು ಶುಕ್ರವಾರ ಆಲಿಸುವುದಾಗಿ ಒಪ್ಪಿಕೊಂಡಿತ್ತು.

200 ಕ್ಕೂ ಹೆಚ್ಚು ಮಕ್ಕಳು ಪ್ರಾಣ ಕಳೆದುಕೊಳ್ಳಲು ಕಾರಣವಾದ ಮಾರಣಾಂತಿಕ ಆನ್‌ಲೈನ್ ಆಟದ ಮೇಲೆ ನಿಷೇಧ ಹೇರಬೇಕೆಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ಮನವಿ ಮಾಡಲಾಗಿದೆ. ಆಟವನ್ನು ಸಂಪೂರ್ಣ ನಿಷೇಧಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಬೇಕೆಂದು ಕೋರಲಾಗಿದೆ.

ಈ ಅರ್ಜಿ ಬಗ್ಗೆ ತಕ್ಷಣಕ್ಕೆ ಯಾವುದೇ ನಿರ್ಧಾರಕ್ಕೆ ಬರುವುದು ಕಷ್ಟ. ಸರ್ಕಾರದ ವಿವರಣೆ ಬಂದ ಬಳಿಕ ಕೋರ್ಟ್ ಮುಂದಿನ ಕ್ರಮ ಪರಿಶೀಲಿಸಲಿದೆ ಎಂದು ನ್ಯಾಯಪೀಠ ಹೇಳಿದೆ.

ವಸ್ತುಸ್ಥಿತಿ ವರದಿಗೆ ಸೂಚನೆ

ಶಾಲೆಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಕುರಿತು ಮುಂದಿನ 3 ವಾರದೊಳಗೆ ಸಂಪೂರ್ಣ ವಿವರ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

ಈಗಿರುವ ಮಾರ್ಗಸೂಚಿಯನ್ನು ಜಾರಿಗೆ ತರುವಂತೆ ಕೋರಿ ಇಬ್ಬರು ಮಹಿಳಾ ನ್ಯಾಯವಾದಿಗಳು ಸಲ್ಲಿಸಿದ ಮನವಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಈ ಆದೇಶ ನೀಡಿದೆ.

ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಮತ್ತು ನ್ಯಾಯಮೂರ್ತಿಗಳಾದ ಅಮಿತಾವ್ ರಾಯ್ ಹಾಗೂ ಎ.ಎಮ್. ಖಾನ್ವಿಲ್ಕರ್ ಅವರನ್ನೊಳಗೊಂಡ ನ್ಯಾಯಪೀಠ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ರಕ್ಷಣೆ ಒದಗಿಸುವುದು ಸರ್ಕಾರಗಳ ಕರ್ತವ್ಯ ಎಂದು ಹೇಳಿದ್ದು ವರದಿಗೆ ನಿರ್ದೇಶನ ಕೊಟ್ಟಿದೆ.

ಪುತ್ರನಲ್ಲ ನನ್ನನ್ನು ವಿಚಾರಣೆ ಮಾಡಿ

ನವದೆಹಲಿ : ಎರ್‌ಸೆಲ್-ಮ್ಯಾಕ್ಸಿಸ್ ಹಗರಣ ಸಂಬಂಧ ತನಿಖೆ ನಡೆಸುತ್ತಿರುವ ಸಿಬಿಐ ಅಧಿಕಾರಿಗಳು ತಪ್ಪು ಮಾಹಿತಿಗಳನ್ನು ನೀಡುತ್ತಿದ್ದಾರೆಂದು ಆರೋಪಿಸಿರುವ ಮಾಜಿ ಹಣಕಾಸು ಸಚಿವ ಪಿ. ಚಿದಂಬರಂ ಹಗರಣ ಸಂಬಂಧ ನನ್ನನ್ನು ವಿಚಾರಣೆಗೊಳಪಡಿಸಿ, ನನ್ನ ಪುತ್ರನನ್ನು ಅಲ್ಲ ಎಂದು ಹೇಳಿಕೊಂಡಿದ್ದಾರೆ.

ಈ ಸಂಬಂಧ ಪುತ್ರ ಕಾರ್ತಿ ಚಿದಂಬರಂ ಅವರನ್ನು ಸಿಬಿಐ ವಿಚಾರಣೆಗೊಳಪಡಿಸಿರುವ ಹಿನ್ನಲೆಯಲ್ಲಿ ಸಾಮಾಜಿಕಜಾಲತಾಣ ಟ್ವಿಟರ್‌ನಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, ಸಿಬಿಐ ಅಧಿಕಾರಿಗಳು ಇಲ್ಲಸಲ್ಲದ ತಪ್ಪು ಮಾಹಿತಿಗಳನ್ನು ನೀಡುತ್ತಿದ್ದಾರೆ. ಸಿಬಿಐಗೂ ಮುನ್ನವೇ ವಿದೇಶಿ ಹೂಡಿಕೆ ಉತ್ತೇಜನ ಮಂಡಳಿ ಹೇಳಿಕೆಯನ್ನು ದಾಖಲಿಸಿಕೊಂಡಿತ್ತು.

ಈ ದಾಖಲೆಗಳು ಮಾನ್ಯತೆಯನ್ನು ಪಡೆದುಕೊಂಡಿದೆ. ಇದನ್ನು ನಾನೂ ಒಪ್ಪಿಕೊಂಡಿದ್ದೇನೆ.

ಸಿಬಿಐ ಅಧಿಕಾರಿಗಳು ಈ ಬಗ್ಗೆ ನನ್ನನ್ನು ವಿಚಾರಣೆ ನಡೆಸಬೇಕೇ ವಿನಃ ನನ್ನ ಪುತ್ರನನ್ನು ಅಲ್ಲ ಎಂದು ಪುನರುಚ್ಚರಿಸಿದ್ದಾರೆ.

ಸದೃಢ ಪೊಲೀಸರಿಗೆ ಮಾತ್ರ ಶೌರ್ಯ ಪದಕ

ನವದೆಹಲಿ: ದೈಹಿಕವಾಗಿ ಸದೃಢರಾಗಿರುವ ಪೊಲೀಸ್ ಅಧಿಕಾರಿಗಳಿಗೆ ಮಾತ್ರ ಇನ್ನು ಮುಂದೆ ಶೌರ್ಯ ಸೇವಾ ಪ್ರಶಸ್ತಿ ಹಾಗು ಪದಕ ನೀಡಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ಹೊಸ ನಿಯಮವನ್ನು ಜಾರಿಗೊಳಿಸಿದೆ.

ಗಣರಾಜ್ಯೋತ್ಸವ ದಿನಾಚರಣೆ ಸಂದರ್ಭದಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದ ಅಧಿಕಾರಿಗಳಿಗೆ ನೀಡುವ ರಾಷ್ಟ್ರಪತಿಗಳ ಪೊಲೀಸ್ ಪದಕ ಮತ್ತು ಪ್ರಶಂಸನೀಯ ಸೇವೆ ಸಲ್ಲಿಸಿದವರಿಗೆ ಸಿಗುವ ಪೊಲೀಸ್ ಪದಕಗಳಿಗೆ ಈ ನಿಯಮ ಅನ್ವಯವಾಗಲಿದೆ.

ಪೊಲೀಸರ ದೈಹಿಕ ಸದೃಢತೆ ವಿಚಾರದಲ್ಲಿ ಎರಡು ವಿಭಾಗಗಳಿರುತ್ತವೆ. ಅದರಂತೆ ಪೊಲೀಸರ ಮಾನಸಿಕ ಆರೋಗ್ಯ, ಶ್ರವಣ ಸಾಮರ್ಥ್ಯ, ಶಾರೀರಿಕ ಸಾಮರ್ಥ್ಯ ಮತ್ತು ದೃಷ್ಟಿ ಸಾಮರ್ಥ್ಯ ಹಾಗೂ ಸಂದರ್ಭಕ್ಕೆ ತಕ್ಕಂತೆ ಪೊಲೀಸ್ ಅಧಿಕಾರಿಯ ಕರ್ತವ್ಯ ನಿಷ್ಠೆಯನ್ನು ಒಳಗೊಂಡಿರುತ್ತದೆ. ಸ್ಥೂಲಕಾಯ ಹೊಂದಿಲ್ಲದೆ ಇರುವುದು ಶಾರೀರಿಕ ಸಾಮರ್ಥ್ಯವೆಂದು ಪರಿಗಣಿತವಾಗುತ್ತದೆ.

ಇನ್ನೊಂದು ವಿಧದಲ್ಲಿ ಪೊಲೀಸರು ಮಾಡುವ ಕರ್ತವ್ಯದ ರೀತಿ, ಮಾನಸಿಕ ಒತ್ತಡ ಮತ್ತು ಕೆಲವು ಮಟ್ಟದವರೆಗೆ ಶ್ರವಣ ಮತ್ತು ದೃಷ್ಟಿ ಸಾಮರ್ಥ್ಯಗಳನ್ನು ಒಳಗೊಂಡಿರುತ್ತದೆ. ಎರಡನೇ ವಿಧಕ್ಕೆ ಕೆಲವು ಸಂದರ್ಭಗಳಲ್ಲಿ ಮಾತ್ರ ವಿನಾಯಿತಿ ನೀಡಲಾಗುತ್ತದೆ ಎಂದು ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಕುಮಾರ್ ಅಲೋಕ್ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಪೊಲೀಸ್ ಪದಕ ಗಳಿಸಲು ಕನಿಷ್ಠ ಇಲಾಖೆಯಲ್ಲಿ 18 ವರ್ಷಗಳ ಸೇವೆ ಸಲ್ಲಿಸಿರಬೇಕು ಮತ್ತು ರಾಷ್ಟ್ರಪತಿಗಳ ಪೊಲೀಸ್ ಪದಕಕ್ಕೆ 25 ವರ್ಷಗಳ ಸೇವೆ ಸಲ್ಲಿಸಿರಬೇಕು ಎಂದು ಉಲ್ಲೇಖಿಸಲಾಗಿದೆ. ಈ ಸುತ್ತೋಲೆಯನ್ನು ಎಲ್ಲಾ ರಾಜ್ಯಗಳ ಗೃಹ ಸಚಿವಾಲಯಗಳಿಗೆ ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ ಕಳುಹಿಸಲಾಗಿದೆ. ಅಲ್ಲದೆ ಕೇಂದ್ರ ಪೊಲೀಸ್ ಸಂಸ್ಥೆಯ ಮುಖ್ಯಸ್ಥರಿಗೆ ಹಾಗೂ ಕೇಂದ್ರ ಪ್ಯಾರಾಮಿಲಿಟರಿ ಪಡೆಗೆ ಕೂಡ ಕಳುಹಿಸಲಾಗಿದೆ.

ಅಸಮರ್ಪಕ ಕರ್ತವ್ಯ ನಿರ್ವಹಣೆ ಆರೋಪದ ಮೇಲೆ ಐಪಿಎಸ್ ಅಧಿಕಾರಿ ಲಿಂಗಲ್ ವಿಜಯ ಪ್ರಸಾದ್ ಅವರನ್ನು ಗೃಹ ಸಚಿವಾಲಯ ಸೇವೆಯಿಂದ ವಜಾಗೊಳಿಸಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಟೆಂಡರ್ ಪ್ರಕಟಣೆ ಸಂಖ್ಯೆ: 11/2017-18 ದಿನಾಂಕ: 11.09.2017

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು ಇವರ ಪರವಾಗಿ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ / ಜಲಸಂಪನ್ಮೂಲ ಇಲಾಖೆಯಲ್ಲಿ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ / ಕಛೇರಿಯಲ್ಲಿ ಇತರೆ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯಲ್ಲಿ ನೋಂದಾಯಿಸಿ ನಂತರ ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು ಕಚೇರಿಯಲ್ಲಿ ಹೆಸರು ದಾಖಲಿಸಿರುವ ಅರ್ಹ ಗುತ್ತಿಗೆದಾರರುಗಳಿಂದ / ಸೆಕ್ಯೂರಿಟಿ ಏಜೆನ್ಸೀಸ್‌ಗಳಿಂದ ಐಟಂವಾರು ಟೆಂಡರ್‌ನ್ನು ಇ-ಟೆಂಡರ್ ಪದ್ಧತಿಯಲ್ಲಿ ಕರೆಯಲಾಗಿದೆ.

ಕಾಮಗಾರಿಯ ಹೆಸರು: Supply of essential workers for operation and maintenance to Taraka dam for the year 2017-18. ಅಂದಾಜು ಮೊತ್ತ ರೂ. 10.18 ಲಕ್ಷಗಳು ಆಗಿರುತ್ತದೆ. ಸದರಿ ಕಾಮಗಾರಿಗೆ ಐಟಂವಾರು ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತದಲ್ಲಿ ಕಡ್ಡಾಯವಾಗಿ ಹೆಸರು ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ. ಮೊತ್ತ ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ, ವಿವರಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: **www.eproc.karnataka.gov.in** ನಲ್ಲಿ ಪಡೆಯಬಹುದು. ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಹಾಗೂ ಇ.ಎಂ.ಡಿ. ಯೊಂದಿಗೆ ಸಲ್ಲಿಸಲು ಕೊನೆಯ **ದಿನಾಂಕ: 25.09.2017 ರಂದು 4.00 ಘಂಟೆಯವರೆಗೆ.** ಟೆಂಡರ್ ಬಿಡ್‌ಗಳನ್ನು ತೆರೆಯುವ **ದಿನಾಂಕ: 27.09.2017 ರಂದು ಸಂಜೆ 5.00 ಘಂಟೆಗೆ.**

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ

DIPR/DD/MYS/Kavita/261

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಚಾಮರಾಜನಗರ ವಿಭಾಗ ಚಾಮರಾಜನಗರ

ಸಂಖ್ಯೆ /ಕಾ.ಪಾ.ಅ/ಚಾ.ವಿ.ಚಾ/ಟೆಂಡರ್/2017-18: ದಿನಾಂಕ: 14.09.2017

(ಎರಡು ಲಕೋಟೆ) ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ 24/2017-18 ದಿನಾಂಕ 14.09.2017

ಚಾಮರಾಜನಗರ ವಿಭಾಗ ಕಛೇರಿಗೆ ಸಂಬಂಧಿಸಿದ ಚಾಮರಾಜನಗರ ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ **ಲೆಕ್ಕ ಶೀರ್ಷಿಕೆ 5054-04-337-0-01-154-** ಜಿಲ್ಲಾ ಮತ್ತು ಇತರೆ ರಸ್ತೆಗಳು-ಸುಧಾರಣೆಗಳ ಅಡಿಯಲ್ಲಿ **K.W-3** ನಂತೆ ಕ್ರಮ ಸಂಖ್ಯೆ 1. ರಿಂದ 3 ರವರೆಗಿನ ಒಟ್ಟು (3) ಕಾಮಗಾರಿಗಳ ಅಂದಾಜು ಮೊತ್ತ **268.96** ಲಕ್ಷ ರೂಗಳು

1) ಇ-ಪ್ರಕ್ಯೂರ್‌ಮೆಂಟ್ ರೀತ್ಯಾ ಡೌನ್ ಲೋಡ್ ಮಾಡಬಹುದಾದ ದಿನಾಂಕ: 14.09.2017 ರಿಂದ 03.10.2017 2) ಇ-ಪ್ರಕ್ಯೂರ್‌ಮೆಂಟ್ ರೀತ್ಯಾ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 03.10.2017 ಸಂಜೆ 16.00 ಗಂಟೆವರೆಗೆ 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.10.2017 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 09.10.2017 ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಾಮರಾಜನಗರ ವಿಭಾಗ ಚಾಮರಾಜನಗರ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂಯು ಈ ಕೆಳಗಿನವುಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ವಿಚಾರಣಾ ಸಂಖ್ಯೆ 1). ಬಿಸಿಪಿ-1041/2017-18. ವಿವರ: 100 ಕೆವಿಎ ವಿತರಣಾ ಪರಿವರ್ತಕಗಳಿಗೆ ಎಲ್‌ಟಿ ವಿತರಣಾ ಪೆಟ್ಟಿಗೆ (ಬಾಕ್ಸ್)ಗಳನ್ನು ಸರಬರಾಜು ಮಾಡುವುದು (ಎಂಎಸ್ ಶೀಟ್). ಪರಿಮಾಣ: 1000 ಸಂಖ್ಯೆ. 2). ಬಿಸಿಪಿ-1042/2017-18. 250 ಕೆವಿಎ ವಿತರಣಾ ಪರಿವರ್ತಕಗಳಿಗೆ ಎಲ್‌ಟಿ ವಿತರಣಾ ಪೆಟ್ಟಿಗೆ (ಬಾಕ್ಸ್)ಗಳನ್ನು ಸರಬರಾಜು ಮಾಡುವುದು (ಎಂಎಸ್ ಶೀಟ್). ಪರಿಮಾಣ: 660 ಸಂಖ್ಯೆ. ಬಿಡ್ ದಾಖಲಾತಿಗಳು ದಿನಾಂಕ: 18-09-2017 ರಿಂದ 17-10-2017 ರ ಮಧ್ಯಾಹ್ನ 3.00 ಗಂಟೆಯ ವರೆವಿಗೆ ಲಭ್ಯ. ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 17-10-2017ರ ಮಧ್ಯಾಹ್ನ 3.00 ಗಂಟೆಯವರೆಗೆ. ಬಿಡ್ ದಾಖಲಾತಿಗಳನ್ನು ತೆರೆಯುವ ದಿನಾಂಕ: 19-10-2017ರ ಮಧ್ಯಾಹ್ನ 3.15 ಗಂಟೆಗೆ.

ಬಿಡ್ ಡಾಕ್ಯೂಮೆಂಟ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: http://www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿ ಕೊಳ್ಳಬಹುದು. ಇಚ್ಛೆಯುಳ್ಳ ಬಿಡ್ಡರ್‌ಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬಹುದು ಹಾಗೂ ಬಿಡ್ಡರ್‌ಗಳು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080-25501216, 25501227 ದಿಂದ ಮಾರ್ಗದರ್ಶನ ಪಡೆಯಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912

ಸಹಿ/- ಪ್ರಧಾನ ವ್ಯವಸ್ಥಾಪಕರು(ಪಿ)
ಖರೀದಿ, ಬೆವಿಕಂ.

ಕರ್ನಾಟಕ ಸರಕಾರ

(ಜಲ ಸಂಪನ್ಮೂಲ ಇಲಾಖೆ)

ನೀರಾವರಿ ಯೋಜನೆಗಳು, ಕಾಡಾ ವಿಭಾಗ, ಕಲಬುರಗಿ

ವಿಳಾಸ: ಪ್ಲಾಟ ನಂ.21, ಕೋಟನೂರ ಧರಿಯಾಪೂರ ರಸ್ತೆ, ಜಿ.ಡಿ.ಎ. ಲೇಔಟ್, 3ನೇ ಮುಖ್ಯ ರಸ್ತೆ "ಬಿ" ಬಾಕ್, ಕಲಬುರಗಿ-585102

ಸಂ.ಕಾಡಾವಿಭಾಗ/ತಾ.ಶಾ-1/ಅಲ್ಪಾವಧಿ ಟೆಂಡರ್ ಪ್ರಕಟಣೆ/2017-18/848 ದಿನಾಂಕ : 08-09-2017

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

1) ಕಾಮಗಾರಿಯ ವಿವರ: 2 ಅಚ್ಚುಕಟ್ಟು ರಸ್ತೆ ನಿರ್ಮಾಣ ಕಾಮಗಾರಿಗಳು. 2) ಲೆಕ್ಕ ಶೀರ್ಷಿಕೆ: 2705 3) ಟೆಂಡರಿಗಿಟ್ಟ ಮೊತ್ತ : ಕನಿಷ್ಠ ರೂ.59,11,631.79 ಗರಿಷ್ಠ ರೂ. 79,93,099.03. 4) ಗುತ್ತಿಗೆದಾರರ ಅರ್ಹತೆ : **KPWD Class-1 & above** 5) ಟೆಂಡರ್ ಫಾರಂ ಪಡೆಯಲು ಅಂತಿಮ ದಿನಾಂಕ : 16.09.2017 ರಿಂದ 18.09.2017 ಸಾಯಂಕಾಲ 5.00 ಗಂಟೆಯವರೆಗೆ. 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಟೆಂಡರ್ ಫಾರಂ ಬೆಲೆ ಇ-ಪ್ರೊಕ್ಯೂರಮೆಂಟ್ ನಿಯಮದಂತೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ. 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 18.09.2017 ಸಾಯಂಕಾಲ 5.00 ಗಂಟೆವರೆಗೆ. 8) ಟೆಂಡರ್ ತೆರೆಯುವ ದಿನಾಂಕ: 29.09.2017 ಬೆಳಗ್ಗೆ 11.00 ಗಂಟೆಗೆ. 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರು, ನೀರಾವರಿ ಯೋಜನೆಗಳು, ಕಾಡಾ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ **www.eproc.karnataka.gov.in**

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ನೀರಾವರಿ ಯೋಜನೆಗಳು ಕಾಡಾ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/650/ಎಂ.ಸಿ.&ಐ/2017-18

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಬಂ. ಮತ್ತು ಒಜಸಾ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು/ಸಂಂ-1/ಟೆಂಡರ್/2017-18 ದಿನಾಂಕ: 13.09.2017

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-21/2017-18 (ಇ-ಪ್ರೊಕ್ಯೂರ್‌ಮೆಂಟ್) ದ್ವಿ ಲಕೋಟೆ ಟೆಂಡರ್ (2ನೇ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW- 3, (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಬಂ ಮತ್ತು ಒಜಸಾ. ಉಪವಿಭಾಗ, ಮಧುಗಿರಿ ತಾಲ್ಲೂಕಿನ ಈ ಕೆಳಗೆ ನಮೂದಿಸಿರುವ ಲೆಕ್ಕ ಶೀರ್ಷಿಕೆ: 5054-04-337-0-01-160 (ಯೋಜನೆ) ಜಿಲ್ಲಾ ಮತ್ತು ಇತರೆ ರಸ್ತೆಗಳು - ನವೀಕರಣ ಅಡಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ www.eproc.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ; 08137-283336

ಮಧುಗಿರಿ ತಾಲ್ಲೂಕಿನ ಒಟ್ಟಾರೆ 1 ಕಾಮಗಾರಿ : ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ. **60.00** ಲಕ್ಷಗಳು (1) ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪಡೆಯಲು ಹಾಗೂ ಸಲ್ಲಿಸುವ ದಿನಾಂಕ: **18.09.2017** ರಿಂದ **03.10.2017** ಸಂಜೆ 4.00 ಗಂಟೆವರೆಗೆ. (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ (ಆನ್‌ಲೈನ್ ಮೂಲಕ) **03.10.2017**ರ ಸಂಜೆ 4.00 ಗಂಟೆವರೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04.10.2017**ರ ಸಂಜೆ 4.15 ಗಂಟೆಯ ನಂತರ. (4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **09.10.2017**ರ ಸಂಜೆ 4.00 ಗಂಟೆ ನಂತರ (5) ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: **28.09.2017** ಸಂಜೆ 4.00 ಗಂಟೆಗೆ ವರೆಗೆ

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಬಂ ಮತ್ತು ಒಜಸಾ ವಿಭಾಗ, ಮಧುಗಿರಿ.

ವಾಸ